# ಬಜಾಜ್ ವಹಿವಾಟು ಹೆಚ್ಚಳ

▪ ವಿಕ ಸುದ್ದಿಲೋಕ ಬೆಂಗಳೂರು

ಬಜಾಜ್ ಎಲೆಕ್ಟ್ರಿಕಲ್ಸ್ ರಾಜ್ಯ ಮಾರುಕಟ್ಟೆಯಲ್ಲಿ ಈ ವರ್ಷ 100 ಕೋಟಿ ರೂ. ವಹಿವಾಟು ಗುರಿ ಹೊಂದಿದೆ. ಈ ನಿಟ್ಟಿನಲ್ಲಿ ಬೀದಿ ದೀಪ ನಿರ್ವಹಣೆ ಸೇರಿದಂತೆ ಹಲವಾರು ಸರಕಾರಿ ಯೋಜನೆಗಳತ್ತ ದೃಷ್ಟಿ ಹಾಯಿಸಿದೆ.

'ರಾಜ್ಯದ ಶೇ.50ರಷ್ಟು ಬೀದಿ ದೀಪ ನಿರ್ವಹಣೆ ಯೋಜನೆಗೆ ಎದುರು ನೋಡುತ್ತಿದ್ದು, ಸುಮಾರು 6 ಕೋಟಿ ರೂ. ವಹಿವಾಟು ನಿರೀಕ್ಷಿತ. ಜತೆಗೆ, ಬಹುತೇಕ ಕಾರ್ಪೊರೇಟ್ ಕಂಪನಿಗಳ ವಿದ್ಯುತ್ ನಿರ್ವಹಣೆ ಸೇವೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಂಡಿದ್ದೇವೆ. ಜಾಗತಿಕ ಮಾರುಕಟ್ಟೆಯಲ್ಲೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ 2,000 ಕೋಟಿ ರೂ.ಗೂ ಹೆಚ್ಚು ವಹಿವಾಟು ನಿರೀಕ್ಷೆಯಿದೆ. ಕಳೆದ ವರ್ಷ 800 ಕೋಟಿ ರೂ. ವಹಿವಾಟು ನಡೆದಿತ್ತು' ಎಂದು ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶೇಖರ್ ಬಜಾಜ್ ಹೇಳಿದರು.

ತೃತೀಯ ತ್ರೈಮಾಸಿಕದಲ್ಲಿ ಸಂಸ್ಥೆಯ ನಿವ್ವಳ ಲಾಭ ಶೇ.76ರಷ್ಟು ಹೆಚ್ಚಾಗಿದ್ದು 34.1 ಕೋಟಿ ರೂ. ತಲುಪಿದೆ.